6) ವಿದ್ಯುತ್ ಮಗ್ಗ ನೇಕಾರರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮದ ಮೂಲಕ ಈ ಕೆಳಕಾಣಿಸಿದ ಹೊಸ ಯೋಜನೆಗಳನ್ನು ಸರ್ಕಾರವು 2000-2001 ಸಾಲಿನಲ್ಲಿ ರೂಪಿಸಿದೆ.

1) ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪನ್ನ ಅಭಿವೃದ್ಧಿ ಕೇಂದ್ರ ಮೂಲಕ ಕ್ಯಾಡ್‌ಕ್ಯಾಮ್ ಸೌಲಭ್ಯ ಒದಗಿಸುವುದು.

2) ಪವರ್ ಲೂಂ ಕಾಂಪ್ಲೆಕ್ಸ್ ಸ್ಥಾಪನೆ

3) ಮಗ್ಗಗಳ ಆಧುನೀಕರಣ

4) ಬಟ್ಟೆ ಸಂಸ್ಕರಣಾ ಘಟಕಗಳನ್ನು ಜಂಟಿ ವಲಯದಲ್ಲಿ ಸ್ಥಾಪಿಸುವುದು.

5) ಇದಲ್ಲದೇ ಇಲಾಖಾ ವತಿಯಿಂದ ವಿದ್ಯುತ್ ಮಗ್ಗ ನೇಕಾರರಿಗಾಗಿ ಈ ಕೆಳಕಂಡ ಯೋಜನೆಗಳನ್ನು ಈಗ ಅನುಷ್ಠಾನ ಮಾಡಲಾಗುತ್ತಿದೆ.

ಅ) ವಿದ್ಯುತ್ ಮಗ್ಗ ನೇಕಾರರ ಸಂಘಗಳಿಗೆ ಷೇರು ಬಂಡವಾಳ

ಆ) ವಿದ್ಯುತ್ ಮಗ್ಗ ಸಂಘಗಳಿಗೆ ಮಗ್ಗ ಪೂರ್ವ ಮತ್ತು ಮಗ್ಗ ನಂತರದ ಸೌಲಭ್ಯ.

ಇ) ಸಾಮೂಹಿಕ ನೇಯ್ಗೆ ಕೇಂದ್ರ.

ಕೋಡಿಚಿಕ್ಕನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಿರುವ ಖರಾಬು ಜಾಗದ ಬಗ್ಗೆ.

2523(2115)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಬರುವ ಕೋಡಿಚಿಕ್ಕನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಿರುವ ಖರಾಬು ಜಾಗವು ಸೇರಿದಂತೆ ಸರ್ಕಾರಿ ಜಮೀನು ವಿಸ್ತೀರ್ಣವೆಷ್ಟು? (ಸರ್ವೆ ನಂ:ವಿಸ್ತೀರ್ಣ, ಮುಂತಾದ ವಿವರ ಒದಗಿಸುವುದು)

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಸರ್ಕಾರಿ ಜಮೀನಿನ ಒಟ್ಟು ವಿಸ್ತೀರ್ಣ 93.02 ಎಕರೆ.

| ವರ್ಗೀಕರಣ | ಸರ್ವೆ ನಂ: | ವಿಸ್ತೀರ್ಣ |
|---|---|---|
| ಮಫತ್‌ಕಾವಲ್ | 9 | 1. 14 |
| ಖರಾಬ್ ತೋಪು | 10 | 0.21 |
| ಕೆರೆ ಪ್ರದೇಶ | 23 | 80.09 |
| ಮುಫತ್‌ಕಾವಲ್ | 19 | 0. 14 |
| ಖರಾಬ್ ಗುಡ್ಡ | 29 | 9.25 |
| ಗುಂಡುತೋಪು | 39 | 0. 39 |
| | ಒಟ್ಟು | 93.02 |

ರಾಜ್ಯದಲ್ಲಿ ಕ್ರಾಪ್ ಇನ್‌ಸೂರೆನ್ಸ್ ಸ್ಕೀಂನ್ನು ಅಳವಡಿಸಲಾದ ಬೆಳೆಗಳು.

2524(2090)

ಶ್ರೀ ಕೆ.ಹೆಚ್. ಹನುಮೇಗೌಡ(ಹಾಸನ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಬೆಳೆಗಳಿಗೆ ಕ್ರಾಪ್ ಇನ್ಸೂರೆನ್ಸ್ ಸ್ಕೀಂನ್ನು ಅಳವಡಿಸಲಾಗಿದೆ.

ಆ) ಕಳೆದ ಮೂರು ವರ್ಷಗಳಿಂದ ಯಾವ ಯಾವ ಬೆಳೆಗಳಿಗೆ ಎಷ್ಟೆಷ್ಟು ಇನ್ಸೂರೆನ್ಸ್ ಹಣ ಪಾವತಿ ಮಾಡಲಾಗಿದೆ.

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ) 1999ರ ಮುಂಗಾರು ಹಂಗಾಮಿನ ವರೆವಿಗೂ ರಾಜ್ಯದಲ್ಲಿ ಜಾರಿಯಲ್ಲಿದ್ದ ವ್ಯಾಪಕ ಬೆಳೆ ವಿಮಾ ಯೋಜನೆಯಡಿಯಲ್ಲಿ ಭತ್ತ, ಜೋಳ, ಸಜ್ಜೆ, ರಾಗಿ, ಮುಸುಕಿನಜೋಳ, ತೊಗರಿ, ನೆಲಗಡಲೆ, ಸೂರ್ಯಕಾಂತಿ, ಗೋಧಿ, ಕಡಲೆ ಮತ್ತು ಕುಸುಮೆ ಬೆಳೆಗಳಿಗೆ ಅಳವಡಿಸಲಾಗಿದೆ.